**M.V.C.No. 1386/2022**
**PW1**

ದಿನಾಂಕ 05.06.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಮುಖ್ಯ ವಿಚಾರಣೆಃಅರ್ಜಿದಾರರ ಪರ ಶ್ರೀಪಿ.ಕೆ.ಪಿ ವಕೀಲರಿಂದಃ</u>

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಪ್ರ.ವ. ವರದಿಯ ದೃಢೀಕೃತ ನಕಲನ್ನು ನಿಪಿ-**1** ಎಂದು, ದೂರಿನ ದೃಢೀಕೃತ ನಕಲನ್ನು ನಿಪಿ-**2** ಎಂದು, ಸ್ಥಳ ಪಂಚನಾಮೆ ದೃಢೀಕೃತ ನಕಲನ್ನು ನಿಪಿ-**3** ಎಂದು, ಸ್ಥಳದ ಕಚ್ಚಾ ನಕಾಶೆಯ ದೃಢೀಕೃತ ನಕಲನ್ನು ನಿಪಿ-**4** ಎಂದು, ಮೋಟಾರು ವಾಹನ ತನಿಖಾ ವರದಿಯ ದೃಢೀಕೃತ ನಕಲನ್ನು ನಿಪಿ-**5** ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಪಿ-**6** ಎಂದು, ಅಂತಿಮ ವರದಿಯ ದೃಢೀಕೃತ ನಕಲನ್ನು ನಿಪಿ-**7** ಎಂದು, **6** ಡಿಸ್ಚಾರ್ಜ್ ಸಮ್ಮರಿಗಳನ್ನು ಒಟ್ಟಾಗಿ ನಿಪಿ-**8** ಎಂದು, ಅಂಗ ಊನತಾ ಪ್ರಮಾಣ ಪತ್ರವನ್ನು ನಿಪಿ-**9** ಎಂದು, 20 re-visit ಕಾರ್ಡುಗಳನ್ನು ಒಟ್ಟಾಗಿ ನಿಪಿ-**10** ಎಂದು, 2 ಅಂತಿಮ ವೆಚ್ಚ ಪಾವತಿ ಮಾಡಿದ ಬಗ್ಗೆ ರಶೀದಿಗಳನ್ನು ನಿಪಿ-**11** ಮತ್ತು **12** ಎಂದು, 54 ವೈದ್ಯಕೀಯ ಚಿಕಿತ್ಸಾ ವೆಚ್ಚ ಪಾವತಿ ರಶೀದಿಗಳನ್ನು ಒಟ್ಟಾಗಿ ನಿಪಿ-**13** ಎಂದು, ಔಷಧಿ ಖರೀದಿ ಮಾಡಿದ ಬಗ್ಗೆ 93 ರಶೀದಿಗಳನ್ನು ಒಟ್ಟಾಗಿ ನಿಪಿ-**14** ಎಂದು, 2 ಸಿ.ಟಿ ಸ್ಕ್ಯಾನ್ ಗಳನ್ನು ನಿಪಿ-**15** ಮತ್ತು **16** ಗುರುತಿಸಲಾಯಿತು. ಗಣಪಯ್ಯ ರವರು ನೀಡಿದ ಪತ್ರವನ್ನು ಎದುರುದಾರರ ಪರ ವಕೀಲರ ಆಕ್ಷೇಪಣೆ ಮೇರೆಗೆ ನಿಪಿ-**17** ಎಂದು ಗುರುತಿಸಲಾಯಿತು. ಕ್ಯುಮುಲೇಟಿವ್ ರೆಕಾರ್ಡನ್ನು ನಿಪಿ-**18** ಎಂದು, ವಾಹನ ವೆಚ್ಚ ಪಾವತಿ ಮಾಡಿದ ಬಗ್ಗೆ ರಶೀದಿಯನ್ನು ಎದುರುದಾರರ ಪರ ವಕೀಲರ ಆಕ್ಷೇಪಣೆ ಮೇರೆಗೆ ನಿಪಿ-**19** ಎಂದು ಗುರುತಿಸಲಾಯಿತು.

ಪಹಣಿ ಪತ್ರಿಕೆಯನ್ನು ನಿಪಿ-**20** ಎಂದು ಗುರುತಿಸಲಾಯಿತು. ಆಧಾರ್ ಕಾರ್ಡಿನ ನೋಟರಿ ಪ್ರತಿಯನ್ನು ನಿಪಿ-**21** ಎಂದು, ವಾಹನ ಚಾಲನಾ ಪರವಾನಿಗೆಯ ನೋಟರಿ ಪ್ರತಿಯನ್ನು ನಿಪಿ-**22** ಎಂದು ಗುರುತಿಸಲಾಯಿತು.

(ಆಧಾರ್ ಕಾರ್ಡ್ ಮತ್ತು ವಾಹನ ಚಾಲನಾ ಪರವಾನಿಗೆಯ ಮೂಲ ಪ್ರತಿ ಮತ್ತು ನೋಟರಿ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು, ತಾಳೆ ಮಾಡಿ ನೋಡಲಾಗಿ ಎರಡರಲ್ಲಿ ಯಾವುದೇ ವ್ಯತ್ಯಾಸ ಇಲ್ಲದ ಕಾರಣ ಮೂಲ ಪ್ರತಿಯನ್ನು ಅರ್ಜಿದಾರರಿಗೆ ವಾಪಾಸು ನೀಡಲಾಯಿತು.

ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಯು.ಎಸ್.ಎನ್ ವಕೀಲರಿಂದಃ

ಅಪಘಾತವನ್ನು ನಾನು ಕಣ್ಣಾರೆ ನೋಡಲಿಲ್ಲ. ಆದ ಕಾರಣ ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಸಮಯ ನನ್ನ ಗಂಡ ತನ್ನ ಬೈಕಿನಲ್ಲಿ ಹೋಗುತ್ತಿದ್ದರು. ನನ್ನ ಗಂಡ ಅಪಘಾತ ಸಮಯದಲ್ಲಿ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ಗಂಡನ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ನನಗೆ ಫೋನ್ ಮಾಡಿ ಮಾಹಿತಿ ನೀಡಿರುತ್ತಾರೆ. ಅಪಘಾತದ ಕುರಿತು ನನ್ನ ಗಂಡನ ದೊಡ್ಡಪ್ಪನ ಮಗನ ಮಗ ದೂರು ನೀಡಿರುತ್ತಾನೆ. ಅಪಘಾತವಾದ ಸಮಯದಲ್ಲಿ ಅವರು ಕನಕಮಜಲಿನಲ್ಲಿ ಇದ್ದರು. ಅಪಘಾತ ಕನಕಮಜಲಿನಲ್ಲಿ ಆಗಿರುತ್ತದೆ. ಪಿರ್ಯಾದುದಾರರು ಪ್ರಕರಣವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರ ನನ್ನ ಸಂಬಂಧಿಕನಾದ ಕಾರಣ ನನ್ನ ಕೋರಿಕೆಯ ಮೇರೆ ಸುಳ್ಳು ದೂರು ನೀಡಿದ್ದಾನೆ ಎಂದರೆ ಸರಿಯಲ್ಲ.

ಅಪಘಾತದ ನಂತರ ನನ್ನ ಗಂಡ ಮೊದಲು ಸುಳ್ಯ ಕೆ.ವಿ.ಜಿ ಆಸ್ಪತ್ರೆಯಲ್ಲಿ ದಾಖಲಾಗಿ ಅದೇ ದಿನ ಮಂಗಳೂರಿನ ಕೆ.ಎಂ.ಸಿ ಆಸ್ಪತ್ರೆಗೆ ದಾಖಲು ಮಾಡಿದ್ದು, ಒಂದು ವಾರಗಳ ನಂತರ ಕೆ.ವಿ.ಜಿ ಆಸ್ಪತ್ರೆಯಲ್ಲಿ ದಾಖಲಾಗಿ 33 ದಿನಗಳ ಕಾಲ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಕೆ.ವಿ.ಜಿ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿ ಯಾವುದೇ ಫಲಕಾರಿಯಾಗದ ಕಾರಣ ವೈದ್ಯರ ಸಲಹೆಯ ಮೇರೆಗೆ ನನ್ನ ಗಂಡನನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸಿ ಮನೆಗೆ ಕರೆದುಕೊಂಡಿರುತ್ತೇವೆ. ಆನಂತರ ಮಂಗಳೂರು ಕೆ.ಎಂ.ಸಿ ಆಸ್ಪತ್ರೆ ಮತ್ತು ಕೆ.ವಿ.ಜಿ

ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇವೆ. ಈಗ ನನ್ನ ಗಂಡ ಮನೆಯಲ್ಲಿದ್ದಾರೆ. ಈಗಲೂ ಅವರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಕೆ.ವಿ.ಜಿ ಆಸ್ಪತ್ರೆ ಮತ್ತು ಕೆ.ಎಂ.ಸಿ ಆಸ್ಪತ್ರೆಯಲ್ಲಿ ನಾನು ಹೇಳಿದಂತೆ ನನ್ನ ಗಂಡ ಒಳರೋಗಿಯಾಗಿ ದಾಖಲಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಅಪಘಾತದ ಬಾಪ್ತು ಸುಮಾರು 11 ಲಕ್ಷದಷ್ಟು ಖರ್ಚಾಗಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನನ್ನು ಮನೆಯಲ್ಲಿ ಸುಂದರಿ ಎಂಬ ಸಹಾಯಕರು ನೋಡಿಕೊಳ್ಳುತ್ತಾರೆ. ನಮ್ಮ ಮನೆಯಲ್ಲಿ ನಾವು 4 ಜನ ಇದ್ದೇವೆ. ನಾವೇ ನನ್ನ ಗಂಡನನ್ನು ನೋಡಿಕೊಳ್ಳುತ್ತಿದ್ದೇವೆಯೇ ವಿನಃ ಬೇರೆ ಯಾವುದೇ ಸಹಾಯಕರನ್ನು ನೇಮಿಸಿಕೋಂಡಿಲ್ಲ ಎಂದರೆ ಸರಿಯಲ್ಲ. ಅವರಿಗೆ ರೂ.50,000 ವೇತನ ನೀಡಿದ ಬಗ್ಗೆ ನನ್ನ ಬಳಿ ದಾಖಲೆ ಇದೆ. ನನ್ನ ಗಂಡ ಮೆಕ್ಯಾನಿಕ್ ಆಗಿ ತಿಂಗಳಿಗೆ ರೂ.15000 ವೇತನ ಪಡೆಯುತ್ತಿದ್ದ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ನನ್ನ ಗಂಡ ಅಂಗಡಿ ಇಟ್ಟುಕೊಂಡು ಮೆಕ್ಯಾನಿಕ್ ಕೆಲಸ ಮಾಡುತ್ತಿರಲಿಲ್ಲ. ಆದರೆ ಕರೆದವರ ಬಳಿ ಹೋಗಿ ಕೆಲಸ ಮಾಡುತ್ತಿದ್ದರು. ನಮಗೆ 1 ಎಕ್ರೆಗೂ ಹೆಚ್ಚು ಕೃಷಿ ಭೂಮಿ ಇದೆ. ನನ್ನ ಗಂಡ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿರಲಿಲ್ಲ, ಆತ ಕೇವಲ ಕೃಷಿ ಮಾಡುತ್ತಿದ್ದ ಎಂದರೆ ಸರಿಯಲ್ಲ. ಅಪಘಾತದಿಂದ ನನ್ನ ಗಂಡನಿಗೆ ಯಾವುದೇ ಆದಾಯ ನಷ್ಟವುಂಟಾಗಿರುವುದಿಲ್ಲ, ಕೃಷಿಯಿಂದ ಆದಾಯ ಬರುತ್ತದೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ವೈದ್ಯಕೀಯ ವೆಚ್ಚ ಪಾವತಿ ರಿಶೀದಿಗಳು, ಔಷಧಿ ರಶೀದಿಗಳು ಮತ್ತು ವಾಹನ ವೆಚ್ಚ ರಶೀದಿಯನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ, ಅವು ನನ್ನ ಗಂಡನ ಚಿಕಿತ್ಸೆ ಸಂಬಂಧಪಟ್ಟವುಗಳಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ದಾಖಲೆಗಳನ್ನು ಸೃಷ್ಟಿಸಿ ಉತ್ಪ್ರೇಕ್ಷಿತವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ